ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ–571201

ಕಛೇರಿ: 08272–225500
ನಿವಾಸ: 08272–225700
ಫ್ಯಾಕ್ಸ್: 08272–225900
ಈ–ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

ಸಂಖ್ಯೆ:ಪ್ರ.ವಿ./ 4 /2018–19

ದಿನಾಂಕ: 19–09–2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯ ಪ್ರಕೃತಿ ವಿಕೋಪ ಪರಿಹಾರ ಕಾರ್ಯ ಸಂಬಂಧ ನಿಯೋಜಿತರಾದ ಅಧಿಕಾರಿ ಮತ್ತು ಸಿಬ್ಬಂದಿಗಳ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಯವರು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ಪತ್ರ ಸಂಖ್ಯೆ: ಸಿಎಎಲ್:ಸಿಆರ್–12:2018–19, ದಿನಾಂಕ 12.09.2018

2) ಶ್ರೀ ಬಿ. ಲೋಕೇಶ್, ಉಪ ತಹಶೀಲ್ದಾರ್, ಮಾಯಕೊಂಡ ಹೋಬಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಹಾಗೂ ತಂಡದ ಸಿಬ್ಬಂದಿಗಳ ಮನವಿ ದಿನಾಂಕ 19.09.2018.

----------

ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಪ್ರಸ್ತುತ ಪರಿಹಾರ ವಿತರಣೆ, ಮೂಲ ಸೌಲಭ್ಯ ಕಲ್ಪಿಸುವಿಕೆ / ಪುನರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಸಂಬಂಧ ಉಲ್ಲೇಖ(1)ರ ಜಿಲ್ಲಾಧಿಕಾರಿಯವರು, ದಾವಣಗೆರೆ ಜಿಲ್ಲೆ, ದಾವಣಗೆರೆರವರ ಅಧಿಕೃತ ಜ್ಞಾಪನದಂತೆ 6 ಅಧಿಕಾರಿ / ಸಿಬ್ಬಂದಿಗಳನ್ನು ಈ ಜಿಲ್ಲೆಗೆ ತಾತ್ಕಾಲಿಕವಾಗಿ ನಿಯೋಜಿಸಲಾಗಿರುತ್ತದೆ. ನಿಯೋಜಿತ ಅಧಿಕಾರಿ ಮತ್ತು ಸಿಬ್ಬಂದಿಗಳು ದಿನಾಂಕ 13.09.2018ರಿಂದ ಇಲ್ಲಿಯವರೆಗೂ ಸಮರೋಪಾದಿಯಲ್ಲಿ ಮತ್ತು ಪ್ರಶಂಸನೀಯ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ.

ಪ್ರಸ್ತುತ, ಉಲ್ಲೇಖ(2)ರ ಕೋರಿಕೆಯಂತೆ ಉಲ್ಲೇಖ(1)ರ ಅಧಿಕೃತ ಜ್ಞಾಪನದಂತೆ ನಿಯೋಜಿತರಾದ ಕಂದಾಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ದಿನಾಂಕ 19.09.2018ರಂದು ಅಪರಾಹ್ನ ಕರ್ತವ್ಯದಿಂದ ಬಿಡುಗಡೆಗೊಳಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಪ್ರತಿಯನ್ನು:

1) ಜಿಲ್ಲಾಧಿಕಾರಿಯವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ಕ್ರಮಕ್ಕಾಗಿ.